**ಕರ್ನಾಟಕ ಸರ್ಕಾರದ ನಡವಳಿಗಳು**

ವಿಷಯ: 2012-13 ವಾಜಪೇಯಿ ನಗರ ವಸತಿ ಯೋಜನೆಯಡಿ ಗುರಿ ನಿಗದಿಪಡಿಸುವ ಬಗ್ಗೆ.

ಓದಲಾಗಿದೆ

1. ಸರ್ಕಾರದ ಆದೇಶ ಸಂಖ್ಯೆ: ವಇ 6 ಹೆಚ್‌ಎಹೆಚ್ 2010, ದಿನಾಂಕ:13.04.2010.
2. ಸರ್ಕಾರದ ಆದೇಶ ಸಂಖ್ಯೆ: ವಇ 90 ಹೆಚ್‌ಎಹೆಚ್ 2012, ದಿನಾಂಕ05.07.2012.
3. ವ್ಯವಸ್ಥಾಪಕ ನಿರ್ದೇಶಕರು, ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ ರವರ ಪತ್ರ ಸಂಖ್ಯೆ:ಆರ್ ಜಿ ಆರ್ ಹೆಚ್ ಸಿ ಎ.ಸ.ಆ ವಿಹೆಚ್‌ಎಸ್2012, ದಿನಾಂಕ:23.5.2012.

ಪ್ರಸ್ತಾವನೆ:

ಓದಲಾಗಿರುವ ಸರ್ಕಾರದ ಆದೇಶ (1)ರಲ್ಲಿ ಸರ್ಕಾರವು 2010-11 ನೇ ಸಾಲಿನಲ್ಲಿ ನಗರ ವಸತಿ ಯೋಜನೆಯನ್ನು ಮಾರ್ಪಡಿಸಿ, ವಾಜಪೇಯಿ ನಗರ ವಸತಿ ಯೋಜನೆಯೆಂಬ ನೂತನ ಯೋಜನೆಯನ್ನು ಜಾರಿಗೊಳಿಸಲಾಗಿದೆ. ಸದರಿ ಆದೇಶದಲ್ಲಿ ಈ ಯೋಜನೆಯಡಿಯಲ್ಲಿ ಪ್ರತಿ ಘಟಕ ವೆಚ್ಚ ರೂ. 1.25ಲಕ್ಷದಂತೆ 25ಚದುರ ಮೀಟರ್, ಶೌಚಾಲಯ ಸೇರಿದಂತೆ ಲಭ್ಯವಿರುವ ಸರ್ಕಾರಿ ಜಮೀನಿನಲ್ಲಿ ಅಥವಾ ಈಗಾಗಲೇ ಬಡಾವಣೆ ಮಾಡಿ ಹಂಚಿದ ನಿವೇಶನಗಳಲ್ಲಿ ಮನೆಗಳನ್ನು ನಿರ್ಮಾಣ ಮಾಡಲು ಪ್ರತಿ ವಿಧಾನ ಸಭಾ ಕ್ಷೇತ್ರಕ್ಕೆ 1000 ಮನೆಗಳಂತೆ ಒಟ್ಟು 3ಲಕ್ಷ ಮನೆಗಳಿಗೆ ಗುರಿ ನೀಡಲಾಗಿತ್ತು.

ಓದಲಾಗಿರುವ ಸರ್ಕಾರದ ಆದೇಶ.(2)ರಲ್ಲಿ 2012-13ನೇ ಸಾಲಿನ ಆಯವ್ಯಯದಲ್ಲಿ ಘೋಷಣೆ ಮಾಡಿರುವಂತೆ ರಾಜ್ಯದಲ್ಲಿ ವಸತಿ ಇಲಾಖೆ ಮುಖಾಂತರ ಅನುಷ್ಠಾನಗೊಳ್ಳುತ್ತಿರುವ ವಸತಿ ಯೋಜನೆಗಳಡಿಯಲ್ಲಿ ಆಯ್ಕೆ ಮಾಡುವ ಫಲಾನುಭವಿಗಳಿಗೆ ಸರ್ಕಾರದ ಸಹಾಯಧನವನ್ನು ರೂ. 50000/-ದಿಂದ ರೂ. 75000/-ವರೆಗೆ ಹೆಚ್ಚಿಸಿ ಆದೇಶ ಮಾಡಲಾಗಿದೆ. ಈ ಆದೇಶದಲ್ಲಿ ವಾಜಪೇಯಿ ನಗರ ವಸತಿ ಯೋಜನೆಯಡಿಯಲ್ಲಿ ನಿರ್ಮಿಸಲಾಗುತ್ತಿರುವ ಮನೆಯ ಘಟಕ ವೆಚ್ಚವನ್ನು ಸಹ ರೂ. 1,30,000/- ದಿಂದ ರೂ.1,80,000/- ಕ್ಕೆ ಹೆಚ್ಚಿಸಲಾಗಿದೆ.

ಓದಲಾಗಿರುವ ನಿಗಮದ ಪತ್ರ, (3)ರಲ್ಲಿ 2012-13ನೇ ಸಾಲಿಗೆ ವಾಜಪೇಯಿ ನಗರ ವಸತಿ ಯೋಜನೆಯಡಿಯಲ್ಲಿ 50000 ಮನೆಗಳ ಗುರಿಯನ್ನು ನಿಗದಿಪಡಿಸುವಂತೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. 2010-11ನೇ ಸಾಲಿನಲ್ಲಿ 50000 ಮನೆಗಳ ಗುರಿ ನೀಡಲಾಗಿದ್ದು, ಆದರೆ 2011-12ನೇ ಸಾಲಿನಲ್ಲಿ ಈ ಯೋಜನೆಯಡಿ ಯಾವುದೇ ಗುರಿಯನ್ನು ನಿಗದಿಪಡಿಸಿರುವುದಿಲ್ಲವೆಂದು ತಿಳಿಸಿರುತ್ತಾರೆ. ಈ ಯೋಜನೆಯಡಿಯಲ್ಲಿ ಮನೆಗಳ ನಿರ್ಮಾಣಕ್ಕೆ ಹೆಚ್ಚಿನ ಬೇಡಿಕೆ ಇರುವುದರಿಂದ 50000 ಮನೆಗಳ ಗುರಿ ನಿಗದಿಪಡಿಸಿ, ಅನುಮೋದನೆ ನೀಡುವಂತೆ ಸರ್ಕಾರಕ್ಕೆ ಕೋರಿರುತ್ತಾರೆ.

ಈ ಪ್ರಸ್ತಾವನೆಯನ್ನು ಪರಿಶೀಲಿಸಿ, ಸರ್ಕಾರವು 2012-13ನೇ ಸಾಲಿಗೆ ವಾಜಪೇಯಿ ನಗರ ವಸತಿ ಯೋಜನೆಯಡಿ 1,00,000 ಮನೆಗಳ ನಿರ್ಮಾಣಕ್ಕೆ ಗುರಿಯನ್ನು ನಿಗದಿ ಪಡಿಸಲು ನಿರ್ಧರಿಸಿ, ಈ ಕೆಳಕಂಡ ಆದೇಶವನ್ನು ಹೊರಡಿಸಿದೆ

**ಸರ್ಕಾರದ ಆದೇಶ ಸಂಖ್ಯೆ: ವಇ 166 ಹೆಚ್‌ಎಹೆಚ್ 2012.**
**ಬೆಂಗಳೂರು, ದಿನಾಂಕ:28-07-2012**

ಸರ್ಕಾರವು ಕೂಲಂಕಷವಾಗಿ ಪ್ರಸ್ತಾವನೆಯನ್ನು ಪರಿಶೀಲಿಸಿ, 2012-13ನೇ ಸಾಲಿಗೆ ವಾಜಪೇಯಿ ನಗರ ವಸತಿ ಯೋಜನೆಯಡಿ, ದಿನಾಂಕ:1.04.2012ರ ನಂತರ ಪ್ರಾರಂಭಿಸುವ ಮನೆಗಳಿಗೆ ಪ್ರತಿ ಮನೆಯ ಘಟಕ ವೆಚ್ಚ ರೂ. 1,80,000/-ದಂತೆ ಈ ಕೆಳಗಿನಂತೆ ಗುರಿಯನ್ನು ನಿಗದಿಪಡಿಸಿದೆ.

| ಸ್ಥಳೀಯ ಸಂಸ್ಥೆಗಳು | ಒಟ್ಟು ಪಟ್ಟಣಗಳ ಸಂಖ್ಯೆ | ಪ್ರತಿ ಪಟ್ಟಣಕ್ಕೆ ಗುರಿ | ಒಟ್ಟು |
|---|---|---|---|
| ಪಟ್ಟಣ ಪಂಚಾಯತ್ | 66 | 200 | 13200 |
| ಪುರಸಭೆ | 97 | 300 | 29100 |
| ನಗರಸಭೆ | 43 | 800 | 34400 |
| ಮಹಾನಗರ ಪಾಲಿಕೆ | 7 | 1800 | 12600 |
| ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ | 1 | 10700 | 10700 |
| ಒಟ್ಟು | 214 | | 1,00,000 |

ಈ ಮೇಲೆ ನಿಗದಿಪಡಿಸಿರುವ ವಾಜಪೇಯಿ ನಗರ ವಸತಿ ಯೋಜನೆಯ ಗುರಿಯನ್ನು ಸಾಧಿಸಲು ಅನುದಾನವನ್ನು 2012-13ನೇ ಸಾಲಿನಲ್ಲಿ ಈ ಯೋಜನೆಗೆ ನೀಡಲಾಗಿರುವ ಅನುದಾನಕ್ಕೆ ಸೀಮಿತಗೊಳಿಸತಕ್ಕದ್ದು, ಎಂಬ ಷರತ್ತಿನೊಂದಿಗೆ ಸರ್ಕಾರದ ಮಂಜೂರಾತಿಯನ್ನು ನೀಡಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ

**(ಬಿ. ಶಂಕರಪ್ಪ)**
**ಪೀಠಾಧಿಕಾರಿ-2, ವಸತಿ ಇಲಾಖೆ**

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ ಇವರಿಗೆ ಮುಂದಿನ ನಂಚಿಕೆಯಲ್ಲಿ ಪ್ರಕಟಿಸಿ 50 ಪ್ರತಿಗಳನ್ನು ಒದಗಿಸಲು ಕೋರಿದೆ.

ಇವರಿಗೆ:

Digitally Signed by :B Shankarappa

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.

2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,

3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ನಮಾಜ ಕಲ್ಯಾಣ ಇಲಾಖೆ, ಬೆಂಗಳೂರು.

4. ಸರ್ಕಾರದ ಅಪರ ಕಾರ್ಯದರ್ಶಿ(ಅಭಿಪ್ರಾಯ), ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ, ಬೆಂಗಳೂರು.

5. ಪ್ರಾದೇಶಿಕ ಆಯುಕ್ತರು, ಬೆಂಗಳೂರು, ಮೈಸೂರು, ಬೆಳಗಾಂ, ಗುಲ್ಬರ್ಗಾ.

6. ಆಯುಕ್ತರು, ಕೊಳಗೇರಿ ಅಭಿವೃದ್ಧಿ ಮಂಡಳಿ, ಬೆಂಗಳೂರು.

7. ಆಯುಕ್ತರು, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು.

8. ವ್ಯವಸ್ಥಾಪಕ ನಿರ್ದೇಶಕರು, ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ( ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ ಇವರಿಗೆ ಈ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿರುವ ರಾಜ್ಯದ ಎಲ್ಲಾ ಅಧಿಕಾರಿಗಳಿಗೆ ಈ ಆದೇಶದ ಪ್ರತಿಗಳನ್ನು ನಿಗಮದ ಮುಖಾಂತರ ಕಳುಹಿಸಲು ಕ್ರಮ ಕೈಗೊಳ್ಳುವುದು )

9. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-9) ವಿಧಾನ ಸೌಧ, ಬೆಂಗಳೂರು.

10. ಪೀಠಾಧಿಕಾರಿ-1, ಸಮನ್ವಯ ಶಾಖೆ, ವಸತಿ ಇಲಾಖೆ, ವಿಕಾಸಸೌಧ, ಬೆಂಗಳೂರು.

11. ಪೀಠಾಧಿಕಾರಿ-4, ವಸತಿ ಇಲಾಖೆ, ವಿಕಾಸಸೌಧ, ಬೆಂಗಳೂರು

12. ರಕ್ಷಾ ಕಡತ ಮತ್ತು ಹೆಚ್ಚುವರಿ ಪ್ರತಿಗಳು.

ಪ್ರತಿಗಳು:-

1. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಸತಿ ಇಲಾಖೆ, ವಿಕಾಸಸೌಧ, ಬೆಂಗಳೂರು

2. ಸರ್ಕಾರದ ಉಪಕಾರ್ಯದರ್ಶಿಯವರ ಆಪ್ತ ಸಹಾಯಕ, ವಸತಿ ಇಲಾಖೆ, ವಿಕಾಸ ಸೌಧ, ಬೆಂಗಳೂರು.

Digitally Signed by :B Shankarappa